# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 103/2019

ಸಿಡಬ್ಲು: 24 / ಪಿಡಬ್ಲು: 16

ದಿನಾಂಕ: 19.12.2023

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜ ಸವಳಬಾವಿ |
| ತಂದೆ /ಗಂಡನ ಹೆಸರು | : | ಕೃಷ್ಣಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಪೋಲೀಸ ಪೇದೆ No. 515, ಮುಂಡರಗಿ ಪೋಲೀಸ ಠಾಣೆ |
| ವಾಸ ಸ್ಥಳ | : | ಮುಂಡರಗಿ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು ಕಳೆದ 5 ವರ್ಷಗಳಿಂದ ಮುಂಡರಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಪೇದೆಯಾಗಿ ಕರ್ತವ್ಯ ಮಾಡುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 17.09.2019 ರಂದು, ನಾನು ಡಂಬಳ ಹೊರ ಠಾಣೆಯಲ್ಲಿದ್ದಾಗ, ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಚಾಸಾ-32 ರವರು ಡಂಬಳ ಹೊರ ಠಾಣೆಗೆ ಬಂದು, ನನ್ನನ್ನು ಹಾಗೂ ಬೇರೆ ಸಿಬ್ಬಂದಿ ಜನರನ್ನು ಕರೆದುಕೊಂಡು ಡೋಣಿ ಗ್ರಾಮಕ್ಕೆ ಹೋಗಿರುತ್ತಾರೆ.

3. ಡೋಣಿ ಗ್ರಾಮದಲ್ಲಿ ಆರೋಪಿತರ ಮನೆಗೆ ಹೋಗಿದ್ದು, ಆರೋಪಿತರು ಮನೆಯಲ್ಲಿ ಇರಲಿಲ್ಲ ಮತ್ತು ಅಲ್ಲಿ 1 ನೇ ಆರೋಪಿಯ ಹೆಂಡತಿ ಮೃತ ಲಕ್ಷ್ಮಿಯು ಸದರಿ ಮನೆಯಲ್ಲಿ ನೇಣು ಹಾಕಿಕೊಂಡಿದ್ದಳು. ಆಗ ಚಾಸಾ-32 ರವರು ಪರಿಶೀಲನೆ ಮಾಡಿರುತ್ತಾರೆ. ಮೃತ ಲಕ್ಷ್ಮಿಯ ದೊಡ್ಡಮ್ಮಳಾದ ಪ್ರಾಸಾ-1 ರವರು ಅಲ್ಲಿಗೆ ಬಂದಿದ್ದು, ಅವರು ಸಂಜೆ 05.45 ಗಂಟೆಗೆ ತಮ್ಮ ದಸ್ತೂರ ಫಿರ್ಯಾದನ್ನು ಚಾಸಾ-32 ರವರಿಗೆ ಕೊಟ್ಟಿರುತ್ತಾರೆ. ಸದರಿ ದೂರನ್ನು ಚಾಸಾ-32 ರವರ ಆದೇಶದ ಮೇರೆಗೆ ನಾನು ಮುಂಡರಗಿ ಪೋಲೀಸ ಠಾಣೆಗೆ ತೆಗೆದುಕೊಂಡು ಹೋಗಿ ಸಂಜೆ 06.45 ಗಂಟೆಗೆ ಚಾಸಾ-33 ರವರ ಮುಂದೆ ಹಾಜರಪಡಿಸಿರುತ್ತೇನೆ. ಈಗ ಸದರಿ ದೂರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿರುತ್ತದೆ.

4. ನಾನು ನಿರ್ವಹಿಸಿದ ಕರ್ತವ್ಯದ ಬಗ್ಗೆ ಚಾಸಾ-34 ರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಜಿ.ಬಿ. ನೀಲರೆಡ್ಡಿ, 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದಃ**

5. ನಾವು ಡೋಣಿ ಗ್ರಾಮಕ್ಕೆ ಹೋದಾಗ, ಸಮಯ ಬೆಳಿಗ್ಗೆ 11.30 ಗಂಟೆಯಾಗಿತ್ತು. ಮದ್ಯಾಹ್ನ 02.00 ಗಂಟೆ ಸುಮಾರಿಗೆ ಪ್ರಾಸಾ-1 ರವರು ಡೋಣಿ ಗ್ರಾಮದ ಆರೋಪಿತರ ಮನೆಗೆ ಬಂದಿರುತ್ತಾರೆ. ನಿಪಿ-1 ನ್ನು ಚಾಸಾ-32 ರವರಿಂದ ಪಡೆದುಕೊಂಡ ಬಗ್ಗೆ ಅದರ ಮೇಲೆ ನಾನು ಸಹಿ ಮಾಡಿರುವುದಿಲ್ಲ. ನಿಪಿ-1 ನ್ನು ಚಾಸಾ-33 ರವರಿಗೆ ಕೊಟ್ಟಾಗ, ಅದರ ಮೇಲೆ ನಾನು ಸಹಿ ಮಾಡಿರುವುದಿಲ್ಲ. ನಿಪಿ-1 ನ್ನು ಚಾಸಾ-32 ರವರು ನನಗೆ ಕೊಟ್ಟ ಬಗ್ಗೆ ಮತ್ತು ನಾನು ಅದನ್ನು ಚಾಸಾ-33 ರವರಿಗೆ ತಲುಪಿಸಿದ ಬಗ್ಗೆ ಬರವಣಿಗೆ ಇರುವುದಿಲಲ.

6. ಪ್ರಾಸಾ-1 ರವರು ಸಂಜೆ 05.45 ಗಂಟೆಗೆ ತಮ್ಮ ದಸ್ತೂರ ಫಿರ್ಯಾದನ್ನು ಚಾಸಾ-32 ರವರಿಗೆ ಕೊಟ್ಟಿರುತ್ತಾರೆ ಮತ್ತು ಅದನ್ನು ನಾನು ಚಾಸಾ-33 ರವರಿಗೆ ತಲುಪಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಕರ್ತವ್ಯ ನಿರ್ವಹಿಸದೇ ಇದ್ದರೂ ಕೂಡಾ ಈ ಕೇಸಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

## ಮರು ವಿಚಾರಣೆ - ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**